# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ಸಾ.ಸ./09/2008-09 ದಿನಾಂಕ:10-07-2008

## -:: ಸಾಮಾನ್ಯ ಸಭೆ ::-

ದಿನಾಂಕ:04-04-2008ರಂದು ಶುಕ್ರವಾರ 12.30ಗಂಟೆಗೆ ಸರಿಯಾಗಿ ನಗರಸಭೆಯ ಸಭಾಂಗಣದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರಾದ **ಶ್ರೀ ಜಿ. ರಾಮಕೃಷ್ಣ** ರವರ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆಯನ್ನು ಕರೆಯಲಾಗಿದ್ದು, ಸದರಿ ಸಭೆಯನ್ನು ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದ ಸಂಬಂಧ ಸಭೆಯನ್ನು ಮುಂದೂಡಲಾಗಿದ್ದು, ಸದರಿ ಸಭೆಯನ್ನು ದಿನಾಂಕ:10-07-2008ರಂದು ಗುರುವಾರ ಬೆಳಿಗ್ಗೆ 11.00ಗಂಟೆಗೆ ಸರಿಯಾಗಿ ನಗರಸಭೆಯ ಸಭಾಂಗಣದಲ್ಲಿ ಕರೆಯಲಾಗಿದ್ದು, ಸದರಿ ಸಭೆಯಲ್ಲಿ **ಮಾನ್ಯ ಉಪವಿಭಾಗಾಧಿಕಾರಿಗಳವರಾದ ಶ್ರೀ ಪಿ.ಆರ್. ಶಿವಪ್ರಸಾದ್,** ಕೆ.ಎ.ಎಸ್., ರವರು ಮತ್ತು ಮಾನ್ಯ ನಗರಸಭಾ ಉಪಾಧ್ಯಕ್ಷರು ಹಾಗೂ ನಗರಸಭಾ ಸದಸ್ಯರುಗಳವರ ಸಮ್ಮುಖದಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಕೆಗಳು :-

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ:**

| ಸದಸ್ಯರುಗಳು | ಹಾಜರಿ | ಗೈರು ಹಾಜರಿ | ಒಟ್ಟು |
|---|---|---|---|
| | 31 | ಇಲ್ಲ | 31 |

ಮೊದಲಿಗೆ ಮಾನ್ಯ ಉಪವಿಭಾಗಾಧಿಕಾರಿಗಳವರು ಮಾತನಾಡಿ ಈ ಕೆಳಕಂಡ ಗಣ್ಯ ವ್ಯಕ್ತಿಗಳವರ ನಿಧನಕ್ಕೆ ಒಂದು ನಿಮಿಷದ ಕಾಲ **"ಶ್ರದ್ಧಾಂಜಲಿ"**ಯನ್ನು ಅರ್ಪಿಸಲಾಯಿತು.

1) ಭಾರತದ ಸೇನಾ ದಂಡಾಧಿಕಾರಿ-ಫೀಲ್ಡ್ ಮಾರ್ಷಲ್ ಸಾಮ್ ಮಾಣಿಕ್ ಷಾ ರವರು ಇಂಡಿಯನ್ ಆರ್ಮಿಯಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸಿ ದಿನಾಂಕ:27-06-2008ರಂದು ನಿಧನರಾಗಿರುತ್ತಾರೆ.
2) ಶ್ರೀ ಮುಗುವಾಳಪ್ಪರವರು ಹಿರಿಯ ಸ್ವಾತಂತ್ರ್ಯ ಹೋರಾಟಗರಾರರು ದಿನಾಂಕ:11-03-2008ರಂದು ನಿಧನರಾಗಿರುತ್ತಾರೆ.
3) ಶ್ರೀ ತೋಟಪ್ಪರವರು-ಮಾಜಿ ಪುರಸಭಾ ಉಪಾಧ್ಯಕ್ಷರು ದಿನಾಂಕ:19-03-2008ರಂದು ನಿಧನರಾಗಿರುತ್ತಾರೆ.
4) ಶ್ರೀ ಅಶ್ವತ್ಥನಾರಾಯಣಚಾರ್ ರವರು ಹಿರಿಯ ಸಾಹಿತಿಗಳು ನಿಧನರಾಗಿರುತ್ತಾರೆ.

ನಂತರ ನಗರಸಭೆಗೆ ಹೊಸದಾಗಿ ಚುನಾಯಿತರಾಗಿ ಹಾಜರಾದ ಎಲ್ಲಾ ಚುನಾಯಿತ ಪ್ರತಿನಿಧಿಗಳವರ ಪರಿಚಯವನ್ನು ಮಾಡಿಕೊಳ್ಳಲಾಯಿತು. ಹಾಗೂ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಹಾಗೂ ಪತ್ರಿಕಾ ಮಾಧ್ಯಮದವರಿಗೆ ಸಭೆಯಲ್ಲಿ ಸ್ವಾಗತವನ್ನು ಕೋರಲಾಯಿತು.

## ಸಭೆಯ ನಡವಳಿಕೆಗಳು :-

**ವಿಷಯ ಸಂಖ್ಯೆ:1**

ಜನವರಿ ಮತ್ತು ಫೆಬ್ರವರಿ-2008ರ ಮಾಹೆಗಳ ಜನನ-ಮರಣಗಳ ವಿವರಗಳನ್ನು ಓದಿ ದಾಖಲಿಸುವ ವಿಚಾರ.

| ಕ್ರ.ಸಂ | ಮಾಹೆವಾರು | ಜನನ | | | ಮರಣ | | |
|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 1 | ಜನವರಿ-2008 | 100 | 103 | 203 | 42 | 25 | 72 |
| 2 | ಫೆಬ್ರವರಿ-2008 | 107 | 107 | 214 | 37 | 15 | 52 |

**ತೀರ್ಮಾನ ಸಂಖ್ಯೆ:1**

ಸದರಿ ವಿಷಯವನ್ನು ಸಭೆಯಲ್ಲಿ ಓದಿ ದಾಖಲಿಸಲಾಯಿತು.

**ವಿಷಯ ಸಂಖ್ಯೆ:2**

ಜನವರಿ ಮತ್ತು ಫೆಬ್ರವರಿ–2008ರ ಮಾಹೆಗಳ ಜಮಾ–ಖರ್ಚುಗಳನ್ನು ಅನುಮೋದಿಸುವ ವಿಚಾರ.

**ತೀರ್ಮಾನ ಸಂಖ್ಯೆ:2**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಜನವರಿ–08 ಮತ್ತು ಫೆಬ್ರವರಿ–08ರ ಮಾಹೆಗಳಲ್ಲಿ ನಡೆದಿರುವ ಜಮಾಖರ್ಚುಗಳು ಮಾನ್ಯ ಆಡಳಿತಾಧಿಕಾರಿಗಳವರ ಆಡಳಿತಾವಧಿಯಲ್ಲಿ ನಡೆದಿರುವುದರಿಂದ ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲು ಕೆಲವು ಸದಸ್ಯರು ವಿರೋಧ ವ್ಯಕ್ತಪಡಿಸಿದ್ದು, ಉಳಿದ ಸದಸ್ಯರು ಈ ಅವಧಿಯ ಜಮಾ–ಖರ್ಚಿನಲ್ಲಿ ನಡೆದಿರುವ ನ್ಯೂನತೆಗಳನ್ನು ತಿಳಿಯಬಹುದು ಎಂಬ ಸಲುವಾಗಿ ನಂತರ ಎಲ್ಲಾ ಸದಸ್ಯರು ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು. ಜಮಾ ಖರ್ಚಿನ ವಿಷಯದಲ್ಲಿ ಅಭಿವೃದ್ಧಿ ಶುಲ್ಕ ಪಾತಿಸಿಕೊಂಡಿರುವ ವಿಷಯಕ್ಕೆ ಕೆಲ ಸದಸ್ಯರು ಅಸಮಾದಾನ ವ್ಯಕ್ತಪಡಿಸಿದ್ದು, ಅಭಿವೃದ್ಧಿ ಶುಲ್ಕ ಪಾವತಿಯು ಮಾನ್ಯ ಜಿಲ್ಲಾಧಿಕಾರಿಗಳವರ ಆದೇಶದಂತೆಯೇ ಅಭಿವೃದ್ಧಿ ಶುಲ್ಕವನ್ನು ಪಾವತಿಸಿಕೊಂಡಿರುವುದರಿಂದ ಕೂಲಂಕುಶವಾಗಿ ಚರ್ಚಿಸಿ ಸರ್ವ ಸದಸ್ಯರು ಅನುಮೋದನೆಯನ್ನು ನೀಡಲಾಯಿತು.

**ವಿಷಯ ಸಂಖ್ಯೆ: 3**

ನಗರಸಭಾ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ಶೌಚಾಲಯಗಳ ಪಿಟ್‌ಗಳು ತುಂಬಿದ್ದು, ಪಿಟ್‌ಗಳನ್ನು ಸ್ವಚ್ಛಗೊಳಿಸಲು ಮಾರ್ಚ್–08ರ ಅಂತ್ಯದವರೆಗೆ ಚಾಲ್ತಿಯಲ್ಲಿರುವಂತೆ ಅದರಲ್ಲಿ ಭಾವಗಹಿಸಿ ರುವ ಮೂರು ಅರ್ಜಿದಾರರಲ್ಲಿ ಹೈಟೋ ಕ್ಲೀನರ್ಸ್ ನಾಗಶೆಟ್ಟಿಹಳ್ಳಿ, ಬೆಂಗಳೂರು ರವರು ನಮೂದಿಸಿದ ದರ ರೂ.1330/–ಗಳು {(ಒಂದು ಸಾವಿರದ ಮೂರು ನೂರ ಮೂವತ್ತು ರೂಪಾಯಿಗಳು ಮಾತ್ರ (ಪಿಟ್ ಒಂದಕ್ಕೆ)} ಅತೀ ಕಡಿಮೆ ಇದ್ದು ಈ ದರವನ್ನು ಅನುಮೋದಿಸುವ ವಿಚಾರ.

**ತೀರ್ಮಾನ ಸಂಖ್ಯೆ:3**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಗರದಲ್ಲಿ ಸಾರ್ವಜನಿಕ ಶೌಚಾಲಯಗಳ ಪಿಟ್ ಗಳು ತುಂಬಿದ್ದು, ಪಿಟ್ ಗಳನ್ನು ಸ್ವಚ್ಛಗೊಳಿಸಲು ಅತೀ ಕಡಿಮೆ ದರ ನಮೂದಿಸಿರುವ ಹೈಟೋ ಕ್ಲೀನರ್ಸ್ ನಾಗಶೆಟ್ಟಿಹಳ್ಳಿ, ಬೆಂಗಳೂರು ರವರ ದರವನ್ನು ಒಪ್ಪಲಾಯಿತು. ಹಾಗೂ ನಗರಸಭಾ ವ್ಯಾಪ್ತಿಯಲ್ಲಿ ಸಾರ್ವಜನಿಕ ಶೌಚಾಲಯಗಳ ಸಂಖ್ಯೆ.26ಇದ್ದು, ಇವುಗಳ ನಿರ್ವಹಣೆಗೆ ಮತ್ತು ಒಳಚರಂಡಿ ವ್ಯವಸ್ಥೆಗೆ ಬೇಕಾಗಿರುವುದರಿಂದ ಗಲ್ಲಿ ಎಮ್‌ಟಿಯರ್/ಸಕ್ಕಿಂಗ್ ಮಿಷನ್ ಖರೀದಿಸುವ ಸಲುವಾಗಿ ದರಪಟ್ಟಿಯನ್ನು ತರಿಸಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 4**

ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರವರಿಗೆ ನೀಡಿರುವ ವಾಹನದ ಬಾಡಿಗೆ ಕರಾರು ಕಾಲಾವಧಿ ಮಾರ್ಚ್–2008ರ ಮಾಹೆಯ ಅಂತ್ಯಕ್ಕೆ ಮುಕ್ತಾಯಗೊಳ್ಳುತ್ತಿದ್ದು, ಈಗ ಹಾಲಿ ಅಧ್ಯಕ್ಷರ ವಾಹನ ಸಹಾಯಕ ಕಾರ್ಯಪಾಲಕ ಅಭಿಯಂತರವರಿಗೆ ನೀಡಿ, ನಗರಸಭಾ ಅಧ್ಯಕ್ಷರಿಗೆ ಹೊಸದಾಗಿ ವಾಹನ ಖರೀದಿಸುವ ವಿಚಾರ.

**ತೀರ್ಮಾನ ಸಂಖ್ಯೆ:4**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಗರಸಭೆಯ ಮುಂಬರುವ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಮುಂದಿನ ಸಭೆಯ ನಂತರ ಹೊಸ ವಾಹನವನ್ನು ಖರೀದಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:5</u>**

ನಗರಸಭೆಗೆ ಸಂಬಂಧಿಸಿದ 35ಮಳಿಗೆ ಹಾಗೂ ಐ.ಡಿ.ಎಸ್.ಎಂ.ಟಿ. ಯೋಜನೆಯ 29 ಮಳಿಗೆ ಮತ್ತು 10ನೇ ಹಣಕಾಸು ಯೋಜನೆಯ 9 ಮಳಿಗೆಗಳು ಒಟ್ಟು 73ಮಳಿಗೆಗಳಲ್ಲಿರುವ ಪರವಾನಿಗೆದಾರರ ಕಾಲಾವಧಿಯು 2008ರ ಮಾರ್ಚ್ ಅಂತ್ಯಕ್ಕೆ ಮುಕ್ತಾಯವಾಗಿರುವುದರಿಂದ ಹಾಲಿ ಇರುವ ಪರವಾನಿಗೆಯ ಮೇಲೆ ಶೇ.10ರಷ್ಟು ದರ ಹೆಚ್ಚಿಸಿ 3ವರ್ಷಗಳ ಕಾಲಾವಧಿಗೆ ನವೀಕರಿಸಿಕೊಡುವ ವಿಚಾರ.

**<u>ತೀರ್ಮಾನ ಸಂಖ್ಯೆ:5</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಹಾಲಿ ವ್ಯವಹಾರ ನಡೆಯುತ್ತಿರುವ ಅಂಗಡಿ ಮಳಿಗೆಗಳ ವಸೂಲಾತಿಯು ಕುಂಠಿತಗೊಂಡಿದ್ದು, ಅತೀ ಜರೂರಾಗಿ ಕಟ್ಟುನಿಟ್ಟಾಗಿ ವಸೂಲಾತಿ ಕ್ರಮಕೈಗೊಳ್ಳಲು ಸಭೆಯಲ್ಲಿ ಸೂಚಿಸಲಾಯಿತು. ಹಾಗೂ ಅವಧಿ ಮುಕ್ತಾಯವಾಗಿರುವ ಅಂಗಡಿ ಮಳಿಗೆಗಳಿಗೆ ಹಾಲಿ ವಿಧಿಸಿರುವ ಪರವಾನಿಗೆಯ ಮೇಲೆ ಶೇ.10ರಷ್ಟು ದರವನ್ನು ಹೆಚ್ಚಿಸಿ ಏಪ್ರಿಲ್-2008ರಿಂದ 3ವರ್ಷಗಳ ಕಾಲಾವಧಿಗೆ ನವೀಕರಿಸಿಕೊಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:6</u>**

ನಗರಸಭೆ ವತಿಯಿಂದ ಹಳೇ ಬಸ್‌ನಿಲ್ದಾಣದ ಎದುರುಗಡೆ ಹೊಸದಾಗಿ ನಿರ್ಮಿತವಾಗಿರುವ ಮಳಿಗೆಗಳು ಮತ್ತು ಐ.ಡಿ.ಎಸ್.ಎಂ.ಟಿ. ಕಟ್ಟಡದ ಮೊದಲನೇ ಅಂತಸ್ತಿನಲ್ಲಿ ಖಾಲಿ ಇರುವ ಮಳಿಗೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿ, ಮರುಪಾವತಿ ಇಲ್ಲದ ಠೇವಣಿ ಪಡೆದು ಬಾಡಿಗೆಗೆ ನೀಡುವ ವಿಚಾರ.

**<u>ತೀರ್ಮಾನ ಸಂಖ್ಯೆ:6</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಸದರಿ ಕಟ್ಟಡದ ಮಳಿಗೆಗಳನ್ನು ಬಾಡಿಗೆಗೆ ನೀಡುವ ಮೊದಲು ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಕ್ರಮಕೈಗೊಳ್ಳಲು ಸೂಚಿಸಿ, ವಿದ್ಯುತ್ ಸಂಪರ್ಕದ ನಂತರ ಸದರಿ ಮಳಿಗೆಗಳನ್ನು ಬಾಡಿಗೆಗೆ ನೀಡುವ ಬಗ್ಗೆ ಚರ್ಚಿಸಬಹುದೆಂಬುದಾಗಿ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:7</u>**

2008-09ನೇ ಸಾಲಿನ ಆಯ-ವ್ಯಯ ಅನುಮೋದನೆ ವಿಚಾರ.

**<u>ತೀರ್ಮಾನ ಸಂಖ್ಯೆ:7</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ 2008-09ನೇ ಸಾಲಿನ ಆಯ-ವ್ಯಯ ಆಡಳಿತಾಧಿಕಾರಿಗಳವರ ಅವಧಿಯಲ್ಲಿ ಅನುಮೋದನೆಗೊಂಡಿದ್ದು, ಈ ಹಿಂದಿನ ಆಯ-ವ್ಯಯಕ್ಕಿಂತ ಉತ್ತಮವಾಗಿರುತ್ತದೆ ಎಂಬುದಾಗಿ ಒಪ್ಪಲಾಗಿ ಈ ಬಗ್ಗೆ ನಿಗಧಿಪಡಿಸಿರುವ ಶೀರ್ಷಿಕೆಗನುಣವಾಗಿ ಪ್ರಗತಿಯನ್ನು ಸಾಧಿಸಲು ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ವಸೂಲಾತಿಯ ಪ್ರಗತಿಯನ್ನು ಸಾಧಿಸಿದಲ್ಲಿ ಆಯ-ವ್ಯಯದಲ್ಲಿ ಕಾಯ್ದಿರಿಸಿರುವ ಎಲ್ಲಾ ಶೀರ್ಷಿಗಳ ಕಾರ್ಯಪ್ರಗತಿಯನ್ನು ಸಾಧಿಸಲು ಮತ್ತು ನಗರದ ಸರ್ವತೋಮುಖ ಅಭಿವೃದ್ಧಿಗೆ ಅನುಕೂಲವಾಗುತ್ತದೆ ಎಂಬುದಾಗಿ ಅಭಿಪ್ರಾಯವನ್ನು ಸಭೆಯಲ್ಲಿ ಮಂಡಿಸಲಾಯಿತು. ಮತ್ತು ಆಯವ-ವ್ಯಯದಲ್ಲಿ ಕೆಲವು ಶೀರ್ಷಿಕೆಗಳಾದ ಕ್ರೀಡಾಭಿವೃದಿಗೆ ರೂ.1.00ಲಕ್ಷ ಪ್ರಕೃತಿ ವಿಕೋಪ, ಮಳೆ ಹಾನಿಗೆ ರೂ.1.50ಲಕ್ಷಗಳ ಹೆಚ್ಚಿಸಲು, ಬೆಂಕಿ ಅಘಘಾತ-5.00ಲಕ್ಷಗಳನ್ನು ನಿಗಧಿಪಡಿಸಲು ತೀರ್ಮಾನಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ತರಬಹುದಾದ ಇತರೆ ವಿಷಯಗಳು:–**

**ವಿಷಯ ಸಂಖ್ಯೆ:** 8/1

ಸುಲಭ ಶೌಚಾಲಯದ ಪರವಾನಿಗೆಯನ್ನು ನವೀಕರಿಸಿಕೊಡುವ ವಿಚಾರ.

**ತೀರ್ಮಾನ ಸಂಖ್ಯೆ:** 8/1

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಗರದ ಹಳೇ ಬಸ್ ನಿಲ್ದಾಣದಲ್ಲಿರುವ ಸುಲಭ ಶೌಚಾಲಯದ ನಿರ್ವಹಣೆ ದಿನಾಂಕ:30–05–2008ಕ್ಕೆ ಮುಗಿದಿದ್ದು, ಸದರಿಯವರು ಶೌಚಾಲಯವನ್ನು ಶ್ರೀ ಟಿ.ನಾಗರಾಜು ಬಿನ್. ತಿಮ್ಮಪ್ಪ ರವರು ಸ್ವಚ್ಛತೆ ಹಾಗೂ ಯಾವುದೇ ರೀತಿಯ ದೂರುಗಳಿಲ್ಲದೆ ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಹಾಲಿ ವಿಧಿಸಿರುವ ಪರವಾನಿಗೆಯ ಮೇಲೆ ಶೇ.20ರಷ್ಟು ದರವನ್ನು ಹೆಚ್ಚಿಸಿ ದಿನಾಂಕ:01–06–2008 ರಿಂದ 4ವರ್ಷಗಳವರೆಗೆ ಪರವಾನಗಿಯನ್ನು ಸದರಿಯವರಿಗೆ ನವೀಕರಿಸಿಕೊಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:8/2**

2008–09ನೇ ಸಾಲಿನ ದಿನಾಂಕ:26–03–2008ರಲ್ಲಿ ಬಹಿರಂಗ ಹರಾಜು ಮಾಡಿರುವ ಮಾರುಕಟ್ಟೆ ನೆಲವಳಿ ಶುಲ್ಕ, ಬಸ್ ನಿಲ್ದಾಣ ವಾಹನಗಳ ಶುಲ್ಕ, ಐ.ಡಿ.ಎಸ್.ಎಂ.ಟಿ. ಮಟನ್ ಅಂಗಡಿ ಮಳಿಗೆಗಳು–3ಶುಲ್ಕ, ಟೌನ್‌ಹಾಲ್ ಬಳಿ ಇರುವ ದ್ವಿಚಕ್ರ ವಾಹನಗಳ ಶುಲ್ಕ ವಸೂಲಿ ಹಕ್ಕನ್ನು ಅಂಗೀಕರಿಸುವ ವಿಚಾರ.

**ತೀರ್ಮಾನ ಸಂಖ್ಯೆ:8/2**

ಅ) ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, 2008–09ನೇ ಸಾಲಿನ ಬಸ್ ನಿಲ್ದಾಣ, ಮಾರುಕಟ್ಟೆ ರಸ್ತೆ ಮತ್ತು ಇತರೆ ನಗರ ವ್ಯಾಪ್ತಿಗೆ ಬರುವ ಅಂಗಡಿಗಳ ನೆಲವಳಿಗೆ ಶುಲ್ಕ, ವಾಹನ ಶುಲ್ಕ ವಸೂಲಿ ಮಾಡುವ ಹಕ್ಕನ್ನು ಶ್ರೀ ಈಶ್ವರಪ್ಪ ಬಿನ್. ಅಣ್ಣಮಲೈ, ದೊಡ್ಡಬಳ್ಳಾಪುರ ರವರಿಗೆ ಅಂತಿಮವಾಗಿ ರೂ.4,10,000/–ಗಳಿಗೆ (ನಾಲ್ಕು ಲಕ್ಷದ ಹತ್ತು ಸಾವಿರ ರೂಪಾಯಿಗಳು ಮಾತ್ರ) ಬಿಡ್ ನಿಂತಿದ್ದು, ದಿನಾಂಕ:01–04–2008ರಿಂದ 31–03–2009ರ ವರೆಗೆ ಒಂದುವರ್ಷದ ಕಾಲಾವಧಿಗೆ ಶುಲ್ಕವಸೂಲಿ ಮಾಡುವ ಹಕ್ಕನ್ನು ಅಂಗೀಕರಿಸಿ ಅನುಮೋದನೆ ನೀಡಲಾಯಿತು.

ಆ) ಹಳೇ ಬಸ್ ನಿಲ್ದಾಣದಲ್ಲಿ ಬರುವ ಖಾಸಗೀ ವಾಹನಗಳಿಗೆ ಶುಲ್ಕ ವಸೂಲಿ ಹಕ್ಕನ್ನು ದಿನಾಂಕ: 01–04–2008ರಿಂದ 31–03–2009ರ ವರೆಗೆ ಬಹಿರಂಗ ಹರಾಜು ಮೂಲಕ ಶ್ರೀ ಎಸ್.ವಾಸು ಬಿನ್, ಶ್ರೀನಿವಾಸ್, ದೊಡ್ಡಬಳ್ಳಾಪುರ ರವರಿಗೆ ರೂ.2,50,000/– (ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳಿಗೆ ಅಂತಿಮ ಬಿಡ್ ನಿಂತ್ತಿದ್ದು, ಸದರಿಯವರಿಗೆ ಶುಲ್ಕವಸೂಲಿಸುವ ಹಕ್ಕನ್ನು ಅಂಗೀಕರಿಸಿ ಅನುಮೋದನೆ ನೀಡಲಾಯಿತು.

ಇ) ನಗರಸಭೆಗೆ ಸೇರಿದ ಐ.ಡಿ.ಎಸ್.ಎಂ.ಟಿ ಯೋಜನೆಯಡಿಯಲ್ಲಿ ನಗರಸಭಾ ವತಿಯಿಂದ ನಿರ್ಮಿಸಿರುವ ಮಾಂಸದ ಅಂಗಡಿಗಳನ್ನು ಈ ಕೆಳಕಂಡರವರಿಗೆ ದಿನಾಂಕ:01–04–2008ರಿಂದ 31–03–2009ರ ವರೆಗೆ ಮಾಹೆಯಾನ ಬಾಡಿಗೆಯನ್ನು ಹರಾಜು ಮೂಲಕ ವಿಲೇಪಡಿಸಿರುವುದನ್ನು ಅನುಮೋದಿಸಿ ಅಂಗೀಕರಿಸಲಾಯಿತು.

| ಕ್ರ.ಸಂ. | ಅಂಗಡಿ ಸಂಖ್ಯೆ | ಹರಾಜುದಾರರ ಹೆಸರು | ಮಾಹೆಯಾನ ಬಾಡಿಗೆ ದರ |
|---|---|---|---|
| 1 | 9 | ಶ್ರೀ ಗಯಾಜ್ ಪಾಷ | 2910.00 |
| 2 | 15 | ಶ್ರೀ ಫಯಾಜ್ ಪಾಷ | 1210.00 |
| 3 | 16 | ಶ್ರೀ ನಜೀರ್ ಅಹ್ಮದ್ | 2910.00 |

ಈ) ನಗರಸಭೆಯ ಟೌನ್ ಹಾಲ್ ಬಳಿಯಿರುವ ದ್ವಿಚಕ್ರವಾಹನಗಳ ಶುಲ್ಕ ವಸೂಲಾತಿಯ ಹಕ್ಕನ್ನು ಶ್ರೀ ಕಾಂತರಾಜು ಬಿನ್. ಮಾರಪ್ಪ, ದೊಡ್ಡಬಳ್ಳಾಪುರ ರವರು ಅಂತಿಮವಾಗಿ ರೂ.65,000/- ಗಳಿಗೆ ಬಿಡ್ ನಿಂತಿದ್ದು, ಇದನ್ನು ದಿನಾಂಕ:01-04-2008ರಿಂದ 31-03-2009ರ ವರೆಗೆ ಅಂಗೀಕರಿಸಿ, ಅನುಮೋದನೆಯನ್ನು ನೀಡಲಾಯಿತು.

**ವಿಷಯ ಸಂಖ್ಯೆ:8/3**

2008-09ನೇ ಸಾಲಿಗೆ ಬೀದಿ ಗುಡಿಸುವ ಕಾರ್ಯಕ್ಕೆ 14 ವಾರ್ಡ್‌ಗಳನ್ನು ಒಳಗೊಂಡಂತೆ (1) ಸೋಮೇಶ್ವರ ಬಡಾವಣೆ (2) ಡಿ. ಕ್ರಾಸ್ (3) ವಿನಾಯಕನಗರ (4) ಸಿದ್ದೇನಾಯಕನಹಳ್ಳಿ (5) ಖಾಸ್ ಬಾಗ್ (6) ದರ್ಗಾಪುರ (7) ವನ್ನಿಗರಪೇಟೆ (8) ಸಂಜಯನಗರ (9) ಕರೇನಹಳ್ಳಿ (10) ಭುವನೇಶ್ವರಿನಗರ (11) ಗಾಣಿಗರಪೇಟೆ (12) ಕಛೇರಿಪಾಳ್ಯ (13) ಶಾಂತಿನಗರ (14) ಮುತ್ಯಾಲಮ್ಮ ಗುಡಿ ಈ ಪ್ರದೇಶಗಳಲ್ಲಿ ಒಟ್ಟು 62 ಕಿ.ಮೀ. ಹಾಗೂ 30ಜನ ಗುಡಿಸುವ ನೌಕರರು ಒಂದು ಟ್ರಾಕ್ಟರ್ ಹಾಗೂ 4ಲೋಡರ್ಸ್‌ಗಳಿಗೆ ತಗಲುವ ವಾರ್ಷಿಕ ಅಂದಾಜು ಮೊತ್ತ ರೂ.23,73,252/-(ಇಪ್ಪತ್ತೂರು ಲಕ್ಷದ ಎಪ್ಪತ್ತೂರು ಸಾವಿರದ ಎರಡು ನೂರ ಐವತ್ತೆರಡು ರೂಪಾಯಿಗಳು ಮಾತ್ರ) ಗಳಿಗೆ ನಗರಸಭಾ ನಿಧಿಯಡಿಯಲ್ಲಿ ಟೆಂಡರ್ ಕರೆಯಲು ಅನುಮೋದಿಸುವ ವಿಚಾರ.

**ತೀರ್ಮಾನ ಸಂಖ್ಯೆ:8/3**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಗರದ ನೈರ್ಮಲ್ಯ ಸ್ವಚ್ಛತಾ ಬಗ್ಗೆ ಹಾಗೂ ಈಗ ಹರಡುತ್ತಿರುವ ಸಾಂಕ್ರಾಮಿಕ ರೋಗಗಳನ್ನು ಗಮನದಲ್ಲಿಟ್ಟುಕೊಂಡು, ಮೇಲ್ಕಂಡ ವಾರ್ಡ್‌ಗಳಲ್ಲಿ ಬೀದಿ ಗುಡಿಸುವ ಕಾರ್ಯದ ರೂ.23,73,252/-ಗಳ ಅಂದಾಜು ಮೊತ್ತಕ್ಕೆ ಟೆಂಡರ್ ಕರೆಯಲು ತೀರ್ಮಾನಿಸಾಯಿತು. ಘನತ್ಯಾಜ್ಯ ವಸ್ತು ವಿಲೇವಾರಿ ಕಾರ್ಯಕ್ಕೆ ಹಾಗೂ ನೈರ್ಮಲ್ಯ ವಿಭಾಗಕ್ಕೆ ಜೆ.ಸಿ.ಬಿ. ಯಂತ್ರ ಅತ್ಯಾವಶ್ಯಕವಾಗಿ ಬೇಕಾಗಿರುವುದರಿಂದ ಒಂದು ಹೊಸ ಜೆ.ಸಿ.ಬಿ.ಯನ್ನು ಖರೀದಿಸಲು ದರಪಟ್ಟಿಯನ್ನು ತರಿಸಿ ಮುಂದಿನ ಸಭೆಗೆ ವಿಷಯವನ್ನು ಮಂಡಿಸಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:8/4**

2007-08ನೇ ಸಾಲಿನಲ್ಲಿ ನಗರದ 10ವಾರ್ಡ್‌ಗಳ ಸ್ವಚ್ಛತೆಗೆ ಗುತ್ತಿಗೆಗೆ ನೀಡಿದ್ದ ಗುತ್ತಿಗೆದಾರರ ಅವಧಿ ದಿನಾಂಕ:30-06-2008ಕ್ಕೆ ಮುಕ್ತಾಯವಾಗಿದ್ದು, ಇದೇ ಸಮಯದಲ್ಲಿ ರಾಜ್ಯದ ಹಲವು ಪ್ರದೇಶಗಳಲ್ಲಿ ಚಿಕುನ್‌ಗುನ್ಯ ಸಾಂಕ್ರಾಮಿಕ ರೋಗ ಹರಡುತ್ತಿದ್ದು, ಈ ಸಂದರ್ಭದಲ್ಲಿ ನಗರದ ಸ್ವಚ್ಛತೆ ಅತ್ಯಾವಶ್ಯಕವಾಗಿರುವುದರಿಂದ ಸಾಮಾನ್ಯ ಸಭೆಯ ಮಂಜೂರಾತಿ ನಿರೀಕ್ಷಣೆ ಮೇರೆಗೆ ಹಾಲಿ ನಿರ್ವಹಿಸುತ್ತಿರುವ ಗುತ್ತಿಗೆದಾರರೇ 10ವಾರ್ಡ್‌ಗಳಲ್ಲಿ ಸ್ವಚ್ಛತೆ ಕಾರ್ಯವನ್ನು ನಿರ್ವಹಿಸುವ ಅವಧಿಯನ್ನು ಮುಂದುವರೆಸಲು ಅನುಮೋದಿಸುವ ವಿಚಾರ.

**ತೀರ್ಮಾನ ಸಂಖ್ಯೆ:8/4**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿದ್ದು, 10ವಾರ್ಡ್‌ಗಳ ಸ್ವಚ್ಛತಾ ಕಾರ್ಯವನ್ನು ತಾತ್ಕಾಲಿಕವಾಗಿ ಹೊಸ ಟೆಂಡರ್ ಪ್ರಕ್ರಿಯೆಯನ್ನು ನಡೆಸುವವರೆಗೆ ಸದರಿ ಗುತ್ತಿಗೆದಾರರವರಿಂದಲೇ ಅದೇ ದರಕ್ಕೆ ನಿರ್ವಹಿಸಲು ಅನುಮೋದಿಸಲಾಯಿತು, ಹಾಗೂ ಹೊಸ ಟೆಂಡರ್ ಪ್ರಕ್ರಿಯೆಯನ್ನು ನಡೆಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:8/5**

ದೊಡ್ಡಬಳ್ಳಾಪುರ ನಗರಸಭೆಯ ಕೆ.ಎಂ.ಆರ್.ಪಿ.ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ಜಂಟಿಖಾತೆಗೆ 2.20ಕೋಟಿಗಳ ಪೈಕಿ ರೂ.25.00ಲಕ್ಷಗಳನ್ನು ಪಾವತಿಸಿದ್ದು, ಅದೇ ರೀತಿ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ, ಬೆಂಗಳೂರು ರವರ ಪತ್ರದ ಸಂಖ್ಯೆ: KUIDFC/UB/KMRP/KB/MTG/007/2007-08/642 D:09-06-2008 ರ ರೀತ್ಯಾ ರೂ.195.00ಲಕ್ಷಗಳ ಪೈಕಿ ರೂ.75.00ಲಕ್ಷಗಳನ್ನು ಜೂನ್–2008ರ ಮಾಹೆಯ ಅಂತ್ಯದೊಳಗೆ ಜಂಟಿ ಖಾತೆಗೆ ಪಾವತಿಸಬೇಕಾಗಿರುತ್ತದೆ. ತಪ್ಪಿದಲ್ಲಿ ಕೆ.ಎಂ.ಆರ್.ಪಿ. ಯೋಜನೆಯಡಿಯಲ್ಲಿ ಈ ನಗರಕ್ಕೆ ಮಂಜೂರಾಗಿರುವ ರೂ.22.00ಕೋಟಿಗಳ ಒಳಚರಂಡಿ ವ್ಯವಸ್ಥೆಯು ವಂಚಿತವಾಗುವ ಸಾಧ್ಯತೆ ಇರುವ ಕಾರಣದಿಂದ ಎಸ್.ಎಫ್.ಸಿ. ಪ್ರೋತ್ಸಾಹ ಅನುಧಾನದಡಿಯಲ್ಲಿ ಸದರಿ ಮೊತ್ತವನ್ನು ಪಾವತಿಸುವ ವಿಚಾರ.

**ತೀರ್ಮಾನ ಸಂಖ್ಯೆ:8/5**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ನಗರದ ಒಳಚರಂಡಿ ವ್ಯವಸ್ಥೆಯು ಅತ್ಯಾವಶ್ಯಕವಾಗಿದ್ದು, ಕೆ.ಎಂ.ಆರ್.ಪಿ. ಯೋಜನೆಯ ಪ್ರಗತಿ ಬಗ್ಗೆ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ, ಬೆಂಗಳೂರು ರವರ ಪತ್ರದ ಸಂಖ್ಯೆ: KUIDFC/UB/KMRP/KB/MTG/007/2007-08/642 D:09-06-2008 ರ ರೀತ್ಯಾ ರೂ.195.00ಲಕ್ಷಗಳ ಪೈಕಿ ರೂ.75.00ಲಕ್ಷಗಳನ್ನು ಜೂನ್–2008ರ ಮಾಹೆಯ ಅಂತ್ಯದೊಳಗೆ ಜಂಟಿ ಖಾತೆಗೆ ಪಾವತಿಸಬೇಕಾಗಿರುವುದ ರಿಂದ ಈ ನಗರಸಭೆಯ ಸದ್ಯದ ಪರಿಸ್ಥಿತಿಯಲ್ಲಿ ಎಸ್.ಎಫ್.ಸಿ. ಪ್ರೋತ್ಸಾಹ ಅನುಧಾನದಡಿಯಲ್ಲಿ ರೂ.55.00ಲಕ್ಷಗಳನ್ನು ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:8/6**

ಐ.ಡಿ.ಎಸ್.ಎಂ.ಟಿ. ಯೋಜನೆಯ ಅಡಿಯಲ್ಲಿ ನಿರ್ಮಿತವಾಗಿರುವ ಕರೂರ್ ವೈಶ್ಯ ಬ್ಯಾಂಕ್ ಪಕ್ಕದಲ್ಲಿರುವ 17ಮಳಿಗೆಗಳನ್ನು ಡಾ:ಮೂರ್ತಿ ಕುಮಾರ್ ರವರಿಗೆ ಐ.ಸಿ.ಯು ಒಳಗೊಂಡ ಆಸ್ಪತ್ರೆಯನ್ನು ತೆರೆಯುವುದಕ್ಕಾಗಿ ನೀಡುವ ವಿಚಾರ.

**ತೀರ್ಮಾನ ಸಂಖ್ಯೆ:8/6**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಸದರಿಯವರಿಗೆ ಬೇಕಾದ ರೀತಿಯಲ್ಲಿ ಅವರ ಸ್ವಂತ ಖರ್ಚಿನಲ್ಲಿಯೇ ಮಳಿಗೆಗಳನ್ನು ಮಾರ್ಪಾಡು ಮಾಡಿಕೊಂಡು ನಗರಸಭೆ ವಹಿಸಿಕೊಡುವ ಸಮಯದಲ್ಲಿ ಮೊದಲಿನಂತೆ ಯಥಾ ಸ್ಥಿತಿಯನ್ನು ಕಾಪಾಡಲು ಹಾಗೂ ಹಾಲಿ ಮಳಿಗೆಗಳಲ್ಲಿ ಕರೂರ್ ವೈಶ್ಯ ಬ್ಯಾಂಕ್ ನವರಿಗೆ ನೀಡಿರುವ ವಿಧಿವಿಧಾನದಲ್ಲಿ ಪಿ.ಡಬ್ಲ್ಯೂ.ಡಿ ದರದಂತೆ ನಿಗಧಿಪಡಿಸಿ ನೀಡಲು ಮಾನ್ಯ ಜಿಲ್ಲಾಧಿಕಾರಿಗಳವರಿಂದ ಅನುಮತಿಯನ್ನು ಪಡೆದು ನೀಡಲು ಹಾಗೂ ಟೌನ್‌ಹಾಲಿನಲ್ಲಿ ವಾಹನಗಳ ನಿಲುಗಡೆಗೆ ಪಾರ್ಕಿಂಗ್ ವ್ಯವಸ್ಥೆ ಇಲ್ಲದೇ ಇರುವ ಕಾರಣದಿಂದ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಪಾರ್ಕಿಂಗ್ ಮಾಡಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:8/7**

ನೂತನವಾಗಿ ಆಯ್ಕೆಯಾಗಿರುವ ನಗರಸಭಾ ಅಧ್ಯಕ್ಷರ ಮತ್ತು ಉಪಾಧ್ಯಕ್ಷರವರ ಕೊಠಡಿಗಳಿಗೆ ಖುರ್ಚಿಗಳನ್ನು ತರಿಸುವ ವಿಚಾರ.

**ತೀರ್ಮಾನ ಸಂಖ್ಯೆ:8/7**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ದೊಡ್ಡಬಳ್ಳಾಪುರ ನಗರಸಭೆಗೆ ನೂತನವಾಗಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರವರು ಆಯ್ಕೆಯಾಗಿದ್ದು, ಅಧ್ಯಕ್ಷರು ಮತ್ತು ಉಪಾಧ್ಯಕ್ಷರವರಿವರಿಗೆ ಹಿಂದೆ ಇದ್ದ ಖುರ್ಚಿಗಳು ಹಳೆಯದಾಗಿದ್ದು, ದುರಸ್ಥಿತಿಯಲ್ಲಿರುವುದರಿಂದ ಹಾಗೂ ಸದರಿ ಕೊಠಡಿಗಳಿಗೆ ಭೇಟಿ ನೀಡುವ ಚುನಾಯಿತ ಪ್ರತಿನಿಧಿಗಳು ಮತ್ತು ಸಾರ್ವಜನಿಕರು ಕುಳಿತುಕೊಳ್ಳಲು ಕುರ್ಚಿಗಳು ಕಡಿಮೆ ಇರುವ ಕಾರಣ ಅಧ್ಯಕ್ಷರು, ಉಪಾಧ್ಯಕ್ಷರವರಿಗೆ ರಿವಾಲ್ವಿಂಗ್ ಛೇರ್‌ಗಳು–2 ಮತ್ತು ಉತ್ತಮ ಗುಣಮಟ್ಟವುಳ್ಳ 30–ಪ್ಲಾಸ್ಟಿಕ್ ಛೇರ್‌ಗಳನ್ನು ತರಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:೮/೮</u>**

ನಗರಸಭಾ ವ್ಯಾಪ್ತಿಯಲ್ಲಿ ವಿದ್ಯುತ್ ದೀಪಗಳ ಅಳವಡಿಸಲು ಸರ್ವ ಸದಸ್ಯರು ಕೋರಿರುವ ವಿಚಾರ.

**<u>ತೀರ್ಮಾನ ಸಂಖ್ಯೆ:೮/೮</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಗರದಲ್ಲಿನ ಸಾರ್ವಜನಿಕರು ಸರ್ವ ಸದಸ್ಯರುಗಳವರಿಗೆ ಬೀದಿದೀಪಗಳ ಕೊರತೆ ಇರುವ ಬಗ್ಗೆ ದೂರುಗಳನ್ನು ನೀಡಿದ್ದು, ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ, ನಗರಸಭಾ ನಿಧಿಯಿಂದ ಪ್ರತಿ ಒಂದು ವಾರ್ಡಿಗೆ 10 ಮೆಟಲ್‌ಹೈಲೆಡ್ ಅಥವಾ ಟ್ಯೂಬ್ ಲೈಟ್‌ಗಳನ್ನು ಖರೀದಿಸಿ ಅಳವಡಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:೮/೯</u>**

**All India Institute of Local Self service** ಸ್ಯಾನಿಟರಿ ಹೆಲ್ತ್ ಇನ್ಸ್‌ಪೆಕ್ಟರ್ ತರಬೇತಿಗೆ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸುವ ಬಗ್ಗೆ.

**<u>ತೀರ್ಮಾನ ಸಂಖ್ಯೆ:೮/೯</u>**

ಸದರಿ ವಿಷಯನ್ನು ಸಭೆಯಲ್ಲಿ ಚರ್ಚಿಸಲಾಗಿ ಈ ಕಛೇರಿಯಲ್ಲಿ ತಾಂತ್ರಿಕ ಶಾಖೆಯಲ್ಲಿ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿರುವ ಶ್ರೀ ವಿ.ಶ್ರೀನಿವಾಸ್ ರವರು ಸದರಿ ತರಬೇತಿಗೆ ಪ್ರವೇಶ ಪಡೆಲು ಮನವಿ ನೀಡಿರುವಂತೆ ಹಾಗೂ ಪ್ರವೇಶ ದಿನಾಂಕ:31-07-2008 ಕೊನೆಯ ದಿನಾಂಕವಾಗಿರುವುದರಿಂದ ಇವರು ಈ ತರಬೇತಿಯನ್ನು ಪಡೆಯಲು ಅರ್ಹರಾಗಿರುವುದರಿಂದ ಸದರಿ ನೌಕರರನ್ನು ಆಯ್ಕೆ ಮಾಡಿ ತರಬೇತಿಗೆ ನಿಯಮಾನುಸಾರ ಕಳುಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

---

**ಸಹಿ:-**
**(ಪಿ.ಬಿ.ಶಿವಪ್ರಸಾದ್), ಕೆ.ಎ.ಎಸ್.,**
**ಪೌರಾಯುಕ್ತರು/ಉಪವಿಭಾಗಾಧಿಕಾರಿಗಳು,**
**ನಗರಸಭೆ, ದೊಡ್ಡಬಳ್ಳಾಪುರ.**

**ಸಹಿ:-**
**(ಜಿ.ರಾಮಕೃಷ್ಣ)**
**ಅಧ್ಯಕ್ಷರು**
**ನಗರಸಭೆ, ದೊಡ್ಡಬಳ್ಳಾಪುರ.**